ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

ಆಗು ನೀ ಅನಿಕೇತನ
BE BOUNDLESS

Central College Campus, Dr. AmbedkarVeedhi,Bengaluru – 560 001.
Ph.No.9844169326 /080- 22131385 email-nssbcu@gmail.com

ಬಿಸಿಯು/ಕು.ಅ.ಕಾ/ಮಾ.ವ.ಜಾಗೃತಿ/2021-22/206 ದಿನಾಂಕ: 10-11-2021

ಇವರಿಗೆ

ಪ್ರಾಂಶುಪಾಲರುಗಳು
ಎಲ್ಲಾ ಸಂಯೋಜಿತ ಕಾಲೇಜುಗಳು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ವಿಷಯ: ಮಾದಕ ವಸ್ತುಗಳ ವಿರುದ್ಧ ಕರ್ನಾಟಕ ಅಭಿಯಾನಕ್ಕೆ ಕಾಲೇಜು ವಿದ್ಯಾರ್ಥಿಗಳನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: 1. ಸುದರ್ಶನ ಚನ್ನಂಗಿಹಳ್ಳಿ, ಸ್ಥಾನಿಕ ಸಂಪಾದಕ (ಬೆಂಗಳೂರು ಮೆಟ್ರೋ) ವಿಜಯ ಕರ್ನಾಟಕ ಪತ್ರದ ದಿನಾಂಕ: 09-11-2021
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 10-11-2021

ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಮಾದಕ ವಸ್ತುಗಳ ವಿರುದ್ಧ ಜಾಗೃತಿ ಮೂಡಿಸಲು ವಿಜಯ ಕರ್ನಾಟಕ ದಿನಪತ್ರಿಕೆ, ಕರ್ನಾಟಕ ಸರ್ಕಾರ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸಹಯೋಗದಲ್ಲಿ ಜಾಗೃತಿ ಅಭಿಯಾನವನ್ನು ದಿನಾಂಕ: 14-11-2021 ರಂದು ವಿಧಾನಸೌಧದ ಮುಂಭಾಗದಲ್ಲಿ ಆಯೋಜಿಸಿದ್ದು ಕಾರ್ಯಕ್ರಮವು ಬೆಳಗ್ಗೆ 7.30 ಗಂಟೆಗೆ ಬೆಂಗಳೂರಿನ ಪ್ಯಾಲೇಸ್ ರಸ್ತೆಯಲ್ಲಿರುವ ಸ್ಕೌಟ್ಸ್ ಅಂಡ್ ಗೈಡ್ಸ್ ಕಛೇರಿಯಿಂದ ವಿಧಾನಸೌಧದವರೆಗೆ ಜಾಥಾವನ್ನು ಆಯೋಜಿಸಿದ್ದು, ಸದರಿ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಶ್ರೀ ಬಸವರಾಜ ಬೊಮ್ಮಾಯಿರವರು ಉದ್ಘಾಟಿಸಲಿದ್ದು ಹಾಗೂ ಮಾನ್ಯ ಗೃಹ ಸಚಿವರಾದ ಆರಗ ಜ್ಞಾನೇಂದ್ರರವರು, ವಿವಿಧ ಗಣ್ಯರು ಹಾಗೂ ಸಂಘ ಸಂಸ್ಥೆಯವರು ಸದರಿ ಜಾಥಾದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸದರಿ ಕಾರ್ಯಕ್ರಮಕ್ಕೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳಿಂದ ತಪ್ಪದೇ ವಿದ್ಯಾರ್ಥಿಗಳನ್ನು ದಿನಾಂಕ: 14-11-2021 ಬೆಳಗ್ಗೆ 7.30 ಗಂಟೆಯ ಒಳಗೆ ಬೆಂಗಳೂರಿನ ಪ್ಯಾಲೇಸ್ ರಸ್ತೆಯಲ್ಲಿರುವ ಸ್ಕೌಟ್ಸ್ ಅಂಡ್ ಗೈಡ್ಸ್ ಕಛೇರಿಯ ಹತ್ತಿರ ನಿಯೋಜಿಸಲು ಕೋರಲಾಗಿದೆ

ಹೆಚ್ಚಿನ ಮಾಹಿತಿಗಾಗಿ ಎನ್.ಎಸ್.ಎಸ್ ಸಂಯೋಜನಾಧಿಕಾರಿಗಳಾದ ಡಾ.ಗೋವಿಂದಗೌಡ ಹೆಚ್.ಜಿ ಮೊ. 9844169326 ರವರನ್ನು ಸಂಪರ್ಕಿಸುವುದು.

10/11/21
ಕುಲಸಚಿವರು

ಪ್ರತಿಗಳು

1. ಶ್ರೀ. ಸುದರ್ಶನ ಚನ್ನಂಗಿಹಳ್ಳಿ, ಸ್ಥಾನಿಕ ಸಂಪಾದಕ (ಬೆಂಗಳೂರು ಮೆಟ್ರೋ) ವಿಜಯ ಕರ್ನಾಟಕ.
2. ಎನ್.ಎಸ್.ಎಸ್ ಸಂಯೋಜನಾಧಿಕಾರಿಗಳು ಬೆ.ನ.ವಿ.
3. ಕುಲಸಚಿವರು/ಕುಲಪತಿಗಳ ಆಪ್ತ ಸಹಾಯಕರು ಬೆ.ನ.ವಿ.
4. ಕಛೇರಿ ಪ್ರತಿ.